**C**

**SL. No. : G**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**CCE PR**
**REVISED**

**ಸಂಕೇತ ಸಂಖ್ಯೆ : 85-K**

**Code No. : 85-K**

# ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 26. 06. 2019 ]
[ Date : 26. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ]
[ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ]
[ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಸಾಧಿಸಿದ ವರ್ತಕರು

(A) ಇಟಲಿಯ ವರ್ತಕರು

(B) ಅರಬ್ ವರ್ತಕರು

(C) ಫ್ರೆಂಚ್ ವರ್ತಕರು

(D) ಭಾರತೀಯ ವರ್ತಕರು

2. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್

(A) ಲಾರ್ಡ್ ವೆಲ್ಲೆಸ್ಲಿ (B) ಲಾರ್ಡ್ ಕಾರನ್‌ವಾಲಿಸ್

(C) ಲಾರ್ಡ್ ಡಾಲ್‌ಹೌಸಿ (D) ಲಾರ್ಡ್ ವಿಲಿಯಂ ಬೆಂಟಿಂಕ್

3. ಶೀತಲ ಸಮರ ಜರುಗಿದ ಎರಡು ರಾಷ್ಟ್ರಗಳ ಸರಿಯಾದ ಗುಂಪು

(A) ಅಮೆರಿಕಾ ಸಂಯುಕ್ತ ಸಂಸ್ಥಾನಗಳು –ಚೀನಾ

(B) ಚೀನಾ – ಸೋವಿಯತ್ ರಷ್ಯಾ

(C) ಅಮೆರಿಕಾ ಸಂಯುಕ್ತ ಸಂಸ್ಥಾನಗಳು – ಜಪಾನ್

(D) ಅಮೆರಿಕಾ ಸಂಯುಕ್ತ ಸಂಸ್ಥಾನಗಳು – ಸೋವಿಯತ್ ರಷ್ಯಾ

4. ತಾಷ್ಕೆಂಟಿನಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಒಪ್ಪಂದವಾದದ್ದು

(A) 1962 ರಲ್ಲಿ (B) 1963 ರಲ್ಲಿ

(C) 1965 ರಲ್ಲಿ (D) 1966 ರಲ್ಲಿ

5. ಅಸಂಘಟಿತ ವಲಯದ ಒಂದು ಲಕ್ಷಣ

(A) ದುಡಿಮೆ (B) ವಲಸೆ

(C) ಕೂಲಿ (D) ಕೂಲಿ ರಹಿತ ದುಡಿಮೆ

6. ಭಾರತದ ಅತ್ಯಂತ ಎತ್ತರವಾದ ಶಿಖರ

(A) ಹಿಮಾಲಯ (B) ಗೌರಿಶಂಕರ

(C) ಮೌಂಟ್ ಎವರೆಸ್ಟ್ (D) ಗಾಡ್ವಿನ್–ಆಸ್ಟಿನ್ / Mt. $K_2$

7. ಈ ಕೆಳಗಿನವುಗಳಲಿ ಒಂದು ಬಿಳಿಲುಗಳು ಬೆಳೆಯುವ ಕಾಡುಗಳಾಗಿವೆ

(A) ನಿತ್ಯಹರಿದ್ವರ್ಣ ಕಾಡುಗಳು (B) ಮಾನ್ಸೂನ್ ಕಾಡುಗಳು

(C) ಮ್ಯಾಂಗ್ರೂವ್ ಕಾಡುಗಳು (D) ಪರ್ವತ ಕಾಡುಗಳು

8. ಒಂದು ವರ್ಷದ ಅವಧಿಯಲ್ಲಿ ದೇಶವು ಉತ್ಪಾದಿಸಿದ ಎಲ್ಲಾ ಸರಕು ಸೇವೆಗಳ ಒಟ್ಟು ಮೌಲ್ಯವು

(A) ರಾಜ್ಯದ ವರಮಾನ (B) ರಾಷ್ಟ್ರೀಯ ವರಮಾನ

(C) ರಾಜ್ಯ ಮತ್ತು ರಾಷ್ಟ್ರದ ವರಮಾನ (D) ತಲಾ ವರಮಾನ

9. ಟೆಲಿ ಶಾಪಿಂಗ್ ಎಂದರೆ

(A) ಮನೆಯಲ್ಲಿಯೇ ಕುಳಿತು ವ್ಯಾಪಾರ ಮಾಡುವುದು

(B) ವಿದೇಶಿ ಮಟ್ಟದಲ್ಲಿ ವ್ಯಾಪಾರ ಮಾಡುವುದು

(C) ಆಂತರಿಕ ವ್ಯಾಪಾರ ಮಾಡುವುದು

(D) ಚಿಲ್ಲರೆ ವ್ಯಾಪಾರ ಮಾಡುವುದು

10. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಚೇರಿ ಇರುವ ಸ್ಥಳ

(A) ರೋಮ್ (B) ಹೊಸ ದಿಲ್ಲಿ

(C) ನ್ಯೂಯಾರ್ಕ್ (D) ಜಿನೇವಾ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು ವಾಕ್ಯದಲ್ಲಿ* ಉತ್ತರ ಬರೆಯಿರಿ :** 14 × 1 = 14

11. ಬ್ರಿಟಿಷರು ಭಾರತದಲ್ಲಿ ತಮ್ಮ ಹಿತಾಸಕ್ತಿಗಾಗಿ ರಾಜಕೀಯ ಪರಮಾಧಿಕಾರವನ್ನು ಹೇಗೆ ಸ್ಥಾಪಿಸಿದರು ?

12. ಬಂಗಾಳದ ವಿಭಜನೆಗೆ ಕಾರಣವೇನು?

13. ಸಂಪತ್ತಿನ ಸೋರಿಕೆಯ ಸಿದ್ಧಾಂತ ಪ್ರತಿಪಾದಕರು ಯಾರು ?

14. ಬ್ರಿಟಿಷರಲ್ಲಿ ಟಿಪ್ಪುವಿನ ವಿರುದ್ಧ ದ್ವೇಷ ಭಾವನೆ ಬೆಳೆಯಲು ಕಾರಣವೇನು ?

15. ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ಹೋರಾಟ ನಡೆಸಿದರು ?

16. ಭಾರತ ಮತ್ತು ಪಾಕಿಸ್ತಾನಗಳು ನಿರಂತರ ಘರ್ಷಣೆಯಿಂದಿರಲು ಕಾರಣವೇನು ?

17. ಮೌನ ಕಣಿವೆ ಆಂದೋಲನವು ಎಲ್ಲಿ ಜರುಗಿತು ?

18. ಕೆಂಪು ಮಣ್ಣು ಹೇಗೆ ರಚನೆಗೊಂಡಿದೆ ?

19. ಶ್ರೀಗಂಧದ ಮರ ಬೆಳೆಯುವ ಕಾಡು ಯಾವುದು ?

20. ಮ್ಯಾಂಗನೀಸನ್ನು ಮಿಶ್ರಲೋಹ ಖನಿಜವೆಂದೇಕೆ ಕರೆಯುವರು ?

21. ಕೇಂದ್ರ ಸರ್ಕಾರವು ಸರಕು ಮತ್ತು ಸೇವಾ ತೆರಿಗೆಯನ್ನು ಏಕೆ ಜಾರಿಗೆ ತಂದಿದೆ ?

22. ಪ್ರಸ್ತುತ ದಿನಗಳಲ್ಲಿ ಗ್ರಾಹಕರ ರಕ್ಷಣೆ ಏಕೆ ಅಗತ್ಯವಾಗಿದೆ ?

23. ಜನಮಂದೆ ಎಂದರೇನು ?

24. ನಿತ್ಯಹರಿದ್ವರ್ಣ ಕಾಡುಗಳು ಸದಾ ಹಸಿರಾಗಿರಲು ಕಾರಣವೇನು ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** 25 × 2 = 50

25. ವೆಲ್ಲೆಸ್ಲಿ ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಯು ಹೇಗಾಯಿತು ?

***ಅಥವಾ***

ಆಂಗ್ಲೋ ಸಿಖ್ ಯುದ್ಧಗಳ ಪರಿಣಾಮಗಳೇನು ?

26. ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು. ಹೇಗೆ ?

27. 1857 ರ ದಂಗೆಗೆ ರಾಜಕೀಯ ಅಂಶಗಳು ಹೇಗೆ ಪ್ರೇರಕವಾದವು ?

28. ಸ್ವಾತಂತ್ರ್ಯಾನಂತರ ಭಾರತದಲ್ಲಿ ಭಾಷಾವಾರು ರಾಜ್ಯ ರಚನೆಯು ಅನಿವಾರ್ಯವಾಯಿತು. ಪುಷ್ಟೀಕರಿಸಿ.

29. ಜರ್ಮನಿಯ ಅವನತಿಗೆ ಹಿಟ್ಲರ್ ಹೇಗೆ ಕಾರಣನಾದನು ?

30. ಭಾರತ ಶಾಂತಿ ಪ್ರಿಯ ರಾಷ್ಟ್ರವಾಗಿದ್ದು ಪರಿಮಿತಿಯಲ್ಲಿನ ನಿಶ್ಶಸ್ತ್ರೀಕರಣವನ್ನು ಪ್ರತಿಪಾದಿಸುತ್ತಿದೆ. ಏಕೆ ?

31. ಯಾವ ಅಂಶಗಳು ಮಾನವ ಹಕ್ಕುಗಳ ಹೋರಾಟಕ್ಕೆ ಸ್ಫೂರ್ತಿಯಾದವು ?

32. ಹಸಿವಿನ ಸೂಚಕವನ್ನು ಹೇಗೆ ಕಂಡಹಿಡಿಯಬಹುದು ?

33. "ಭಾರತದ ವಾಯುಗುಣವು ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ." ಈ ಹೇಳಿಕೆಯನ್ನು ಸಮರ್ಥಿಸಿ.

34. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಜಲಸಂಪನ್ಮೂಲವು ಹೇಗೆ ಬಹುಮುಖ್ಯ ಸಂಪನ್ಮೂಲವಾಗಿದೆ ?

35. ದೂರಸಂವೇದಿ ತಂತ್ರಜ್ಞಾನವು ಯಾವ ರೀತಿ ಅನುಕೂಲವಾಗಿದೆ ?

36. ಜನಸಂಖ್ಯೆಯ ಬೆಳವಣಿಗೆಗೆ ಕಡಿಮೆ ಮರಣದರವು ಯಾವ ರೀತಿ ಕಾರಣವಾಗಿದೆ ?

37. ಶೀಘ್ರ ಆಹಾರ ಸರಪಳಿಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ರೋಗರುಜಿನಗಳಿಗೆ ಹೇಗೆ ಎಡೆಮಾಡಿಕೊಡುತ್ತವೆ ಎಂಬುದನ್ನು ವಿವರಿಸಿ.

38. ಮಹಿಳಾ ಸಬಲೀಕರಣವನ್ನು ಹೇಗೆ ಸಾಧಿಸಬಹುದು ?

39. ಪುಷ್ಪ ಕೃಷಿಯು ಭಾರತೀಯ ರೈತರ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ?

40. ದ್ವಿಪ್ರಭುತ್ವ ಪದ್ಧತಿಯ ಲಕ್ಷಣಗಳನ್ನು ತಿಳಿಸಿ.

41. ಸಹಾಯಕ ಸೇನಾ ಪದ್ಧತಿಯ ಕರಾರುಗಳನ್ನು ತಿಳಿಸಿ.

42. ಲಿಂಗ ತಾರತಮ್ಯದ ಪ್ರಕಾರಗಳು ಯಾವುವು ?

43. ಮಣ್ಣಿನ ಸವೆತದ ಪರಿಣಾಮಗಳೇನು ?

44. ಭಾರತದಲ್ಲಿ ನೀರಾವರಿಯು ಅತ್ಯಗತ್ಯವಾಗಿದೆ. ಏಕೆ ?

45. ಉತ್ತರ ಭಾರತದ ಮೈದಾನದ ಪ್ರಾಮುಖ್ಯತೆ ತಿಳಿಸಿ.

46. ನಮಗೆ ಅಂಚೆ ಕಚೇರಿಗಳು ಯಾವ ಸೇವೆಗಳನ್ನು ಸಲ್ಲಿಸುತ್ತವೆ ?

47. ಪ್ರತ್ಯಕ್ಷ ಹಾಗೂ ಪರೋಕ್ಷ ತೆರಿಗೆಗಳಿಗೆ ಪ್ರತಿಯೊಂದಕ್ಕೂ ಎರಡು ಉದಾಹರಣೆ. ತಿಳಿಸಿ.

48. ಜಾಗತೀಕರಣವು ದೇಶದ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಹೇಗೆ ?

49. ಆರ್ಯ ಸಮಾಜದ ಉದ್ದೇಶಗಳು ಯಾವುವು ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** 6 × 3 = 18

50. ಬ್ರಿಟಿಷರ ಭೂಕಂದಾಯ ಪದ್ಧತಿಯು ಭಾರತೀಯ ರೈತರ ಮೇಲೆ ಹೇಗೆ ಪರಿಣಾಮ ಬೀರಿತು ?

**ಅಥವಾ**

ಆಂಗ್ಲರ ವಿರುದ್ಧ ಕಿತ್ತೂರಿನಲ್ಲಾದ ದಂಗೆಯನ್ನು ವಿವರಿಸಿ.

51. ಬಡತನದ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ?

**ಅಥವಾ**

ವಿಶ್ವಸಂಸ್ಥೆಯ ಸಾಧನೆಗಳೇನು ?

52. ಅಸ್ಪೃಶ್ಯತಾ ತಡೆಗೆ ಸಂವಿಧಾನಾತ್ಮಕ ಕ್ರಮಗಳನ್ನು ತಿಳಿಸಿ.

**ಅಥವಾ**

ಅಸಂಘಟಿತ ದುಡಿಮೆದಾರರು ಎದುರಿಸುತ್ತಿರುವ ಸವಾಲುಗಳು ಯಾವುವು ?

53. ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಸ್ಥಾನೀಕರಣಕ್ಕೆ ಬೇಕಾದ ಅಂಶಗಳು ಯಾವುವು ?

**ಅಥವಾ**

ಪ್ರವಾಹಗಳು ಉಂಟಾಗಲು ಯಾವುದಾದರೂ ಆರು ಅಂಶಗಳನ್ನು ತಿಳಿಸಿ.

54. ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಯಾವ ಕಾರ್ಯಗಳ ಮೂಲಕ ದೇಶದ ಹಿತಕ್ಕಾಗಿ ಶ್ರಮಿಸುತ್ತಿದೆ ?

**ಅಥವಾ**

ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ತನ್ನ ವರಮಾನವನ್ನು ಹೇಗೆ ಸಂಗ್ರಹಿಸುತ್ತಿದೆ ?

55. ಉಳಿತಾಯ ಖಾತೆಗೂ ಚಾಲ್ತಿ ಖಾತೆಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.

**ಅಥವಾ**

ಉದ್ದಿಮೆದಾರರಾದ ಏಕ್ತಾ ಕಪೂರ್ ಮತ್ತು ಕಿರಣ್ ಮುಜುಮ್‌ದಾರ್ ಷಾರವರ ಸಾಧನೆಗಳೇನು ?

V. **ಈ ಕೆಳಗಿನ ಪ್ರಶ್ನೆಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** 4

56. ಗಾಂಧೀಜಿಯವರು ಅಸಹಕಾರ ಚಳುವಳಿಯಲ್ಲಿ ಹಾಕಿಕೊಂಡಿದ್ದ ಕಾರ್ಯಕ್ರಮಗಳನ್ನು ವಿವರಿಸಿ.

VI. 57. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4

a) ಕಾಂಡ್ಲಾ

b) ದಿಗ್ಬಾಯ್

c) ಕನ್ಯಾಕುಮಾರಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳು ಯಾವುವು ? 4